ರಸ್ತೆಯ ವೆಚ್ಚ ಮತ್ತು ಲೆಕ್ಕ ಶೀರ್ಷಿಕೆ

1845 (2105); ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ (ಹುಬ್ಬಳ್ಳಿ–ಧಾರವಾಡ ಪಶ್ಚಿಮ)

ಅ) ಹುಬ್ಬಳ್ಳಿ–ಧಾರವಾಡದ ಗೋಕುಲ ರಸ್ತೆಯಿಂದ ವಿಮಾನ ನಿಲ್ದಾಣದ ವರೆಗಿನ ರಸ್ತೆಯ ಉದ್ದವೆಷ್ಟು; ಇದಕ್ಕೆ ತಗುಲಿದ ಸಂಪೂರ್ಣ ವೆಚ್ಚ ವೆಷ್ಟು;

ಆ) ಈ ರಸ್ತೆಯ ಅಭಿವೃದ್ಧಿಗೆ ಯಾವ ಯಾವ ಲೆಕ್ಕ ಶೀರ್ಷಿಕೆಯಡಿಯಲ್ಲಿ ಹಣವನ್ನು ವೆಚ್ಚ ಮಾಡಲಾಗಿದೆ. (ಸಂಪೂರ್ಣ ಮಾಹಿತಿ ಒದಗಿಸುವುದು)?

ಡಾ: ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ಹೊಸೂರು ಕ್ರಾಸ್‌ದಿಂದ ಹುಬ್ಬಳ್ಳಿ ವಿಮಾನ ನಿಲ್ದಾಣದವರೆಗಿನ ರಸ್ತೆಯ ಉದ್ದವು 5.00 ಕಿ.ಮೀ. ಇರುತ್ತದೆ. ಈ ರಸ್ತೆಯ ಅಭಿವೃದ್ಧಿಗೆ 8443–ಅಸೈಡ್ ಸಹಾಯ ಧನ & 5054 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒಟ್ಟು ` 2174.61 ಲಕ್ಷಗಳ ವೆಚ್ಚ ಭರಿಸಲಾಗಿದೆ.

ಆ) ಸದರಿ ರಸ್ತೆಯ ಅಭಿವೃದ್ಧಿಗೆ ವಿವಿಧ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ವೆಚ್ಚ ಮಾಡಲಾದ ಹಣದ ವಿವರ ಈ ಕೆಳಗಿನಂತಿವೆ:

ಕ್ರ. ಸಂ.	ಲೆಕ್ಕ ಶೀರ್ಷಿಕೆ	ವೆಚ್ಚ (ರೂ. ಲಕ್ಷಗಳಲ್ಲಿ)
1	8443 ಅಸೈಡ್ ಸಹಾಯ ಧನ	1021.79
2	5054 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ	1152.82

ಕಾಮಗಾರಿಯ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಲಾಗಿದೆ.

ಅನುಬಂಧ–1

ಕ್ರ ಸಂ.	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ಮಂಜೂರಾದ ಅಂದಾಜು ಮೊತ್ತ (ರೂ.ಗಳಲ್ಲಿ)	ಅಭಿವೃದ್ಧಿಪಡಿಸಲಾದ ರಸ್ತೆ ಉದ್ದ (ಕಿ.ಮೀ.ನಲ್ಲಿ)	ಇಲ್ಲಿಯವರೆಗೆ ಭರಿಸಲಾದ ವೆಚ್ಚ (ರೂ. ಲಕ್ಷಗಳಲ್ಲಿ)			ಪ್ರಸ್ತುತ ಕಾಮಗಾರಿ ಹಂತ
					8443 ಅಸೈಡ್ ಸಹಾಯಧನ	5054 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ	ಒಟ್ಟು	
1	ಅಸೈಡ್ ಸಹಾಯ ಧನ & 5054 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ	ಹುಬ್ಬಳ್ಳಿ–ಗೋಕುಲ ಜಿಲ್ಲಾ ಮುಖ್ಯ ರಸ್ತೆಯ ಹೊಸೂರು ಕ್ರಾಸ್ ದಿಂದ ಏರಪೋರ್ಟವರೆಗೆ ಬಲಪಡಿಸಿ ಅಭಿವೃದ್ಧಿಪಡಿಸುವುದು.	1728.00	5.00	1021.79	713.23	1735.02	ಕಾಮಗಾರಿ ಪೂರ್ಣಗೊಂಡಿದೆ.
2	5054 ಜಿಲ್ಲಾ ಮುಖ್ಯ ರಸ್ತೆ	ಹುಬ್ಬಳ್ಳಿ ತಾಲ್ಲೂಕಿನ ಹುಬ್ಬಳ್ಳಿ–ಗೋಕುಲ ಜಿಲ್ಲಾ ಮುಖ್ಯ ರಸ್ತೆ ಹೊಸೂರ ಕ್ರಾಸ್	200.00	1.20 (ಫುಟ್ ಪಾತ್ ಮತ್ತು ಆರ್.ಸಿ.ಸಿ. ಗಟಾರ)	0.00	83.02	83.02	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ

	ಸುಧಾರಣೆ	ನಿಂದ ವಿಮಾನ ನಿಲ್ದಾಣವರೆಗೆ ಫುಟ್‌ಪಾತ್ ಮತ್ತು ಆರ್.ಸಿ.ಸಿ.ಗಟಾರ ನಿರ್ಮಾಣ (ಕಿ.ಮೀ. 0.50 ರಿಂದ 1.85ವರೆಗೆ)						
3	5054 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ	ಹುಬ್ಬಳ್ಳಿ ತಾಲೂಕಿನ ಹುಬ್ಬಳ್ಳಿ–ಗೋಕುಲ ಜಿಲ್ಲಾ ಮುಖ್ಯ ರಸ್ತೆ ಹೊಸೂರ ಕ್ರಾಸ್‌ನಿಂದ ವಿಮಾನ ನಿಲ್ದಾಣದವರೆಗೆ ಫುಟ್‌ಪಾತ್ ಮತ್ತು ಆರ್.ಸಿ.ಸಿ.ಗಟಾರ ನಿರ್ಮಾಣ (ಕಿ.ಮೀ. 1.85 ರಿಂದ 3.00ವರೆಗೆ)	200.00	1.27 (ಫುಟ್‌ಪಾತ್ ಮತ್ತು ಆರ್.ಸಿ.ಸಿ.ಗಟಾರ)	0.00	188.63	188.63	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ.
4	5054 ಜಿಲ್ಲಾ ಮುಖ್ಯ ರಸ್ತೆ	ಹುಬ್ಬಳ್ಳಿ ತಾಲ್ಲೂಕಿನ ಹುಬ್ಬಳ್ಳಿ–ಗೋಕುಲ ಜಿಲ್ಲಾ ಮುಖ್ಯ ರಸ್ತೆ ಹೊಸೂರು ಕ್ರಾಸ್	200	1.05 (ಫುಟ್‌ಪಾತ್ ಮತ್ತು ಆರ್.ಸಿ.ಸಿ. ಗಟಾರ)	0.00	167.94	167.94	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ.

	ಸುಧಾರಣೆ	ನಿಂದ ವಿಮಾನ ನಿಲ್ದಾಣವರೆಗೆ ಫುಟ್ ಪಾತ್ ಮತ್ತುಆರ್.ಸಿ.ಸಿ.ಗಟಾರ ನಿರ್ಮಾಣ (ಕಿ.ಮೀ. 3.00 ರಿಂದ 4.00 ವರೆಗೆ)						
		ಒಟ್ಟು	**2328.00**		**1021.79**	**1152.82**	**2174.61**	